# ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

## ಸಿ.ಸಿ. ನಂ. 69/2025

| | | |
|---|---|---|
| ಸಾಕ್ಷಿದಾರರ ಹೆಸರು | ಉಮೇಶ್ | |
| ತಂದೆಯ/ಗಂಡನ ಹೆಸರು | ಚಂದ್ರಪ್ಪ | ಡಿ .ಡಬ್ಲ್ಯೂ-1 |
| ವಯಸ್ಸು | 47 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ಅಡಿಕೆ ವ್ಯಾಪಾರ | ದಿನಾಂಕಃ |
| ವಾಸಃ | ಸಾಗರ | 30.01.2026 |

**ಮೌಖಿಕ ಮುಖ್ಯ ವಿಚಾರಣೆಃ ಆರೋಪಿತನ ವಕೀಲರಾದ ಶ್ರೀ ಎಂ.ಎ.ಬಿ ರವರಿಂದಃ**

1. ಫಿರ್ಯಾದಿ ನನಗೆ ಗೊತ್ತು. ನಾನು ಸೊರಬ ತಾಲ್ಲೂಕಿನ ಮೂಡುಗೋಡು ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ವಿವಾಹವಾಗಿರುತ್ತೇನೆ. ನಾನು ಅಡಿಕೆ ವ್ಯಾಪಾರ ಮಾಡುವುದರಿಂದ ಅಡಿಕ ಸುಲಿಯುವ ಯಂತ್ರವನ್ನು ಸ್ಥಾಪಿಸುವ ಸಲುವಾಗಿ ನಾನು ಜಾಗವನ್ನು ಹುಡುಕುತ್ತಿದ್ದೆ. ಆಗ ನನ್ನ ಹೆಂಡತಿಯ ಊರಾದ ಮೂಡಗೋಡಿನ ಲಕ್ಷ್ಮಿನಾರಾಯಣರವರ ಸರ್ವೇ ನಂಬರ್ 1/10 ರ 15 ಗುಂಟೆ ಜಾಗವನ್ನು ಅಡಿಕೆ ಸುಲಿಯುವ ಯಂತ್ರವನ್ನು ಸ್ಥಾಪಿಸಲು ನೋಡಿದ್ದೆ. ದಿನಾಂಕ 31.07.2024 ರಂದು ಆ ಜಾಗವನ್ನು 4.5 ಲಕ್ಷ ರೂ.ಗಳಿಗೆ ಖರೀದಿಸಲು ವ್ಯಾಪಾರ ಮಾಡಿ ಲಿಖಿತ ಕರಾರನ್ನು ಸಹ ಮಾಡಿಕೊಂಡಿದ್ದೆ. 2 ಲಕ್ಷ ರೂ. ಹಣವನ್ನು ಮುಂಗಡವಾಗಿ ನಾನು ದಿನಾಂಕ 01.08.2024 ರಂದು ಲಕ್ಷ್ಮೀ ನಾರಾಯಣರವರಿಗೆ ನನ್ನ ಕೆನರಾ ಬ್ಯಾಂಕಿನಿಂದ ವರ್ಗಾವಣೆ ಮಾಡಿದ್ದೇನೆ. 2 ಲಕ್ಷ ಮುಂಗಡ ಹಣವನ್ನು ಕೊಟ್ಟ ನಂತರ ಕರಾರಿನ ದಾಖಲೆಯನ್ನು ನನಗೆ ಕೊಡುವುದಾಗಿ ಲಕ್ಷ್ಮೀ ನಾರಾಯಣರವರು ಹೇಳಿದ್ದರು. ಆದರೆ ಮುಂಗಡ ಹಣವನ್ನು ನನ್ನಿಂದ ಪಡೆದುಕೊಂಡ ನಂತರವೂ ಸಹ ಕರಾರಿನ ದಾಖಲೆಯನ್ನು ನನಗೆ ಕೊಡಲಿಲ್ಲ. ಈ ಬಗ್ಗೆ ಕೇಳಿದಾಗ ಲಕ್ಷ್ಮೀ ನಾರಾಯಣರವರು ಆ ಜಾಗದ ಖಾತೆ ತನ್ನ ಮಗ ಸುಮಂತನ ಹೆಸರಿನಲ್ಲಿದ್ದು, ಅವನ ಬಂದ ನಂತರ ಅವನ ಮೂಲಕ ನೊಂದಣಿ ಮಾಡಿಸಿಕೊಡುತ್ತೇನೆ ಎಂದು ಹೇಳಿದರು.

2. ದಿನಾಂಕ 17.10.2024 ರಂದು ಲಕ್ಷ್ಮೀ ನಾರಾಯಣರವರು ನನಗೆ ಫೋನ್ ಮಾಡಿ ನನ್ನ ಮಗ ಸುಮಂತನು ಬರುತ್ತಿದ್ದಾನೆ, ದಿನಾಂಕ 18.10.2024 ರಂದು ಜಮೀನನ್ನು ನೊಂದಣಿ

ಮಾಡಿಸಿಕೊಳ್ಳಲು ತಯಾರಾಗಿರು ನೊಂದಣಿ ಪತ್ರವನ್ನು ನಾನೇ ತಯಾರು ಮಾಡಿಸುತ್ತೇನೆ ಎಂದು ಹೇಳಿದರು. ಅದರಂತೆ ನಾನು ದಿನಾಂಕ 18.10.2024 ರಂದು ಸೊರಬದ ಉಪ ನೊಂದಾಣಿಧಿಕಾರಿಗಳ ಕಚೇರಿಗೆ ನನ್ನ ಗುರುತಿನ ಚೀಟಿ ಹಾಗೂ ಆಧಾರ್ ಕಾರ್ಡನ್ನು ತೆಗೆದುಕೊಂಡು ಹೋದೆ. ಆಗ ಲಕ್ಷ್ಮೀ ನಾರಾಯಣರವರರು ತಯಾರು ಮಾಡಿದ್ದ ಕ್ರಯ ಪತ್ರವನ್ನು ನಾನು ಓದಿದಾಗ ಕ್ರಯದ ಪ್ರತಿಫಲವನ್ನು 4,50,000/- ಎಂದು ಬರೆದಿದ್ದು, ಲಕ್ಷ್ಮೀ ನಾರಾಯಣರವರಿಗೆ ನಾನು ಮುಂಗಡವಾಗಿ ಕೊಟ್ಟಿದ್ದ 2 ಲಕ್ಷ ಹಣವನ್ನು ನಮೂದು ಮಾಡಿರಲಿಲ್ಲ. ಈ ಬಗ್ಗೆ ನಾನು ಲಕ್ಷ್ಮೀ ನಾರಾಯಣರವರಿಗೆ ವಿಚಾರಿಸಿದಾಗ ಜಮೀನಿನ ಖಾತೆ ತನ್ನ ಮಗ ಸುಮಂತನ ಹೆಸರಿನಲ್ಲಿ ಇರುವುದರಿಂದ ಪೂರ್ತಿ ಹಣವನ್ನು ಅವನಿಗೆ ಕೊಡುವಂತೆ ಹಾಗೂ ನನ್ನಿಂದ ಪಡೆದಿದ್ದ 2 ಲಕ್ಷ ಮುಂಗಡ ಹಣವನ್ನು ವಾಪಾಸ್ಸು ಕೊಡುವುದಾಗಿ ಲಕ್ಷ್ಮೀ ನಾರಾಯಣರವರು ನನಗೆ ಹೇಳಿದರು. 2 ಲಕ್ಷ ಹಣವನ್ನು ನಿನ್ನ ಖಾತೆಗೆ ಜಮಾ ಮಾಡುತ್ತೇನೆ, ಆ ಹಣ ಬಂದ ನಂತರ ನನಗೆ ಹೇಳಿದರೆ ಆಗ ಕ್ರಯದ ಪ್ರತಿಫಲವಾಗಿ ಕೊಟ್ಟಿರುವ 4,50,000/-ರೂ.ಗಳ ಚೆಕ್ ಅನ್ನು ನಗದೀಕರಣಕ್ಕೆ ಹಾಜರು ಪಡಿಸುತ್ತೇವೆ ಎಂದು ಲಕ್ಷ್ಮೀ ನಾರಾಯಣರವರು ಹಾಗೂ ಸುಮಂತರವರು ನನಗೆ ಹೇಳಿದರು. ನನ್ನಿಂದ ಪಡೆದಿದ್ದ 2 ಲಕ್ಷ ಮುಂಗಡ ಹಣವನ್ನು ವಾಪಸ್ಸು ಕೊಡದೆ ದಿನಾಂಕ 19.10.2024 ರಂದು ಕ್ರಯದ ಪ್ರತಿಫಲವಾಗಿ ನಾನು ನೀಡಿದ್ದ ನಿಪಿ-1 ರ ಚೆಕ್ ಅನ್ನು ಬ್ಯಾಂಕಿಗೆ ಹಾಜರು ಪಡಿಸಿ ಅದನ್ನು ಬೌನ್ಸ್ ಮಾಡಿಸಿ ವಕೀಲರಿಂದ ನೋಟೀಸ್ ಅನ್ನು ನನಗೆ ಕೊಡಿಸಿದ್ದಾರೆ. ಆನಂತರ ಸೊರಬದ ತಹಶೀಲ್ದಾರ್ ಕಚೇರಿಯಲ್ಲಿ ಕ್ರಯ ಪತ್ರದ ಅನ್ವಯ ಖಾತೆ ಬದಲಾವಣೆಯಾಗದಂತೆ ಫಿರ್ಯಾದಿ ಮತ್ತು ಅವನ ತಂದೆ ತಕರಾರು ಅರ್ಜಿಯನ್ನು ಹಾಕಿದ್ದಾರೆ. ಆನಂತರವೂ ಸಹ ನಾನು ನನ್ನ ಮುಂಗಡ ಹಣವನ್ನು ವಾಪಸ್ಸು ನೀಡಿದರೆ ಕ್ರಯದ ಪ್ರತಿಫಲದ ಹಣವನ್ನುಕೊಡುತ್ತೇನೆ ಎಂದು ಹೇಳಿದರೂ ಸಹ ಫಿರ್ಯಾದಿ ಮತ್ತು ಅವನ ತಂದೆ ಈ ಪ್ರಕರಣವನ್ನು ನನ್ನ ಮೇಲೆ ದಾಖಲು ಮಾಡಿದ್ದಾರೆ.

3. ಫಿರ್ಯಾದಿಯಿಂದ ನಾನು ಯಾವುದೇ ಅಡಿಕೆಯನ್ನು ಖರೀದಿ ಮಾಡಿಲ್ಲ. ನಾನು ಜಿ ಎಸ್ ಟಿ ಹೋಲ್ಡರ್ ಆಗಿರುವುದರಿಂದ ನಾನು ಯಾವುದೇ ಅಡಿಕೆ ಖರೀದಿ ಮತ್ತು ಮಾರಾಟ ಮಾಡಿದರೆ ರಶೀದಿಯನ್ನು ಕೊಡುತ್ತೇನೆ. ಆನಂತರ ನಾನು ಫಿರ್ಯಾದಿ ಮತ್ತು ಅವನ ತಂದೆಯನ್ನು ವಿಚಾರಿಸಿದಾಗ ಜಾಗದ ಬೆಲೆ ಹೆಚ್ಚಾಗಿರುವುದರಿಂದ 4,5 ಲಕ್ಷ ರೂ.ಗಳನ್ನು ಕೊಟ್ಟರೆ ನಾವು ಕೇಸನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು. ಫಿರ್ಯಾದಿ ತಂದೆಗೆ ನಾನು ಹಣವನ್ನು ನೀಡಿರುವ ಬಗ್ಗೆ ನನ್ನ ಬಳಿ ದಾಖಲೆಗಳು ಇವೆ. ಅಲ್ಲದೆ ನಾನು ಆದಾಯ ತೆರಿಗೆ ಪಾವತಿದಾರ ಎಂದು

ತೋರಿಸುವ ಬಗ್ಗೆ ನನ್ನ ಬಳಿ ದಾಖಲೆಗಳು ಇವೆ. ಅವುಗಳನ್ನು ನನ್ನ ಪರವಾಗಿ ನಿಶಾನೆಗಳಾಗಿ ಗುರುತಿಸಬೇಕೆಂದು ಕೋರುತ್ತೇನೆ.

4. ಸ್ಟೇಟ್ ಮೆಂಟ್ ಆಫ್ ಅಕೌಂಟ್ಸ್ ಅನ್ನು ನಿಡಿ-1 ಎಂದು, 2025-26 ರ ಆದಾಯ ತೆರಿಗೆ ಪಾವತಿ ಸ್ವೀಕೃತಿಯನ್ನು ನಿಡಿ-2 ಎಂದು, ಐ.ಟಿ ರಿಟರ್ನ್ಸ್ ನ ಮೂರು ದಾಖಲೆಗಳನ್ನು ನಿಡಿ-3 ರಿಂದ ನಿಡಿ-5 ಎಂದು ಗುರುತಿಸಲಾಯಿತು. ಆದ್ದರಿಂದ ನನ್ನ ದೋಷಮುಕ್ತನನ್ನಾಗಿ ಬಿಡುಗಡೆ ಮಾಡಬೇಕೆಂದು ಕೋರುತ್ತೇನೆ.

**ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.